**ದಿಃ 12–08–2024 ರಂದು ಸಾಕ್ಷಿಧಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಮುಖ್ಯವಿಚಾರಣೆಃ ಅರ್ಜಿದಾರರ ಪರ ಶ್ರೀ.ಜಿ ಆರ್ ಸಿ ವಕೀಲರಿಂದ**

ದೂರಿನ ದೃಢಿಕೃತ ನಕಲನ್ನು ಹಾಜರು ಮಾಡಿದ್ದು, ನಿ.ಪಿ.1 ಎಂದು ಗುರುತಿಸಲಾಯಿತು. ಪ್ರ.ವ.ವ ವರದಿಯ ದೃಢಿಕೃತ ನಕಲನ್ನು ಹಾಜರು ಮಾಡಿದ್ದು, ನಿ.ಪಿ.2 ಎಂದು ಗುರುತಿಸಲಾಯಿತು. ಸ್ಥಳ ಮಹಜರಿನ ದೃಢಿಕೃತ ನಕಲನ್ನು ಹಾಜರು ಮಾಡಿದ್ದು, ನಿ.ಪಿ.3 ಎಂದು ಗುರುತಿಸಲಾಯಿತು. ಕಚ್ಚಾ ನಕ್ಷೆಯ ದೃಢಿಕೃತ ನಕಲನ್ನು ಹಾಜರು ಮಾಡಿದ್ದು, ನಿ.ಪಿ.4 ಎಂದು ಗುರುತಿಸಲಾಯಿತು. ಐ.ಎಂ.ವಿ ವರದಿಯ ದೃಢಿಕೃತ ನಕಲನ್ನು ಹಾಜರು ಮಾಡಿದ್ದು, ನಿ.ಪಿ.5 ಎಂದು ಗುರುತಿಸಲಾಯಿತು. ನನ್ನ ಮಗಳ ಗಾಯದ ಪ್ರಮಾಣ ಪತ್ರದ ದೃಢಿಕೃತ ನಕಲನ್ನು ಹಾಜರು ಮಾಡಿದ್ದು, ನಿ.ಪಿ.6 ಎಂದು ಗುರುತಿಸಲಾಯಿತು. ನನ್ನ ಮಗಳಿಗೆ ಸಂಬಂದಪಟ್ಟಂತೆ ಎಸ್ ಡಿ ಎಂ ಸಿ ಆಸ್ಪತ್ರೆಯ ಎರಡು ಡಿಸ್ಚಾರ್ಜ ಸಮರಿಯನ್ನು ಹಾಜರು ಪಡಿಸಿದ್ದು ನಿಪಿ –7 ಮತ್ತು 8 ಎಂದು ದೋಷಾರೋಪಣ ಪತ್ರದ ದೃಢಿಕೃತ ನಕಲನ್ನು ಹಾಜರು ಮಾಡಿದ್ದು, ನಿ.ಪಿ.9 ಎಂದು ಗುರುತಿಸಲಾಯಿತು. ಒಟ್ಟು 156 ಮೆಡಿಕಲ್ ಬಿಲ್ಲುಗಳನ್ನು ಹಾಜರು ಮಾಡಿದ್ದು, ಕ್ರಮವಾಗಿ ನಿ.ಪಿ.10 ರಿಂದ ನಿ.ಪಿ.165 ಎಂದು ಗುರುತಿಸಲಾಯಿತು. ಒಟ್ಟು 99 ಔಷಧಿ ಚೀಟಿಗಳನ್ನು ಹಾಜರು ಮಾಡಿದ್ದು, ಕ್ರಮವಾಗಿ ನಿಪಿ.166 ರಿಂದ ನಿ.ಪಿ.264 ಎಂದು ಗುರುತಿಸಲಾಯಿತು. ಒಂದು ಲ್ಯಾಬ್ ವರದಿಯನ್ನು ಹಾಜರು ಪಡಿಸಿದ್ದು ನಿಪಿ–265 ಎಂದು ಎಕ್ಸ್ ರೇ ಗಳನ್ನು ಹಾಜರು ಪಡಿಸಿದ್ದು ಒಟ್ಟಾರೆಯಾಗಿ ಅವುಗಳನ್ನು ನಿಪಿ–266 ಎಂದು ಗುರುತಿಸಲಾಯಿತು. ಅರ್ಜಿಯಲ್ಲಿ ಕೇಳಿದಂತೆ ಪರಿಹಾರ ಕೊಡಲು ಪ್ರಾರ್ಥಿಸುತ್ತೇನೆ.

**ಪಾಟೀ ಸವಾಲು: 1 ನೇ ಎದುರುದಾರ ಪರ ಕು. ಪಿ ಎಸ್ ಪಿ ವಕೀಲರಿಂದ**

ಅಪಘಾತವಾದ ಕಾಲಕ್ಕೆ ವಾಹನಕ್ಕೆ ವಿಮೆ ಚಾಲ್ತಿಯಲ್ಲಿಯತ್ತು. ಅಪಘಾತವಾದ ಕಾಲಕ್ಕೆ ಅದರಚಾಲಕನಿಗೆ ಚಾಲನಾ ಪರವಾನಿಗೆ ಇತ್ತು. ಅದೇ ರೀತಿ ಆ ವಾಹನಕ್ಕೆ ಪರ್ಮಿಟ ಮತ್ತು ಪಿಟ್ನೆಸ್ ಸರ್ಟಿಫಿಕೇಟ ಸಹ ಇತ್ತು. ಆ ಕಾರಣ ನನಗೆ 1 ನೇ ಎದುರುದಾರರು ಪರಿಹಾರ ಕೊಡಲು ಬಾಧ್ಯಸ್ಥರು ಎಂದರೆ ಸರಿ.

**ಪಾಟೀ ಸವಾಲು: 2 ನೇ ಎದುರುದಾರ ಪರ ಶ್ರೀ. ಎಂ ಜಿ ಎಂ ಪಿವಕೀಲರಿಂದ**

ಅಪಘಾತವಾದ ಕಾಲಕ್ಕೆ ನನಗೆ ವಾಹನ ಚಲಾಯಿಸಲು ಚಾಲನಾ ಪರವಾನಿಗೆ ಇಲ್ಲ ಎಂದರೆ ಸರಿಯಲ್ಲ. ಅಪಘಾತಕ್ಕೆ ಸಂಬಂಧಪಟ್ಟಂತೆ ಅಪಘಾತವಾದ 6 ತಿಂಗಳೊಳಗಾಗಿ ಈ ಅರ್ಜಿಯನ್ನು ಸಲ್ಲಿಸಬೇಕಾಗಿದ್ದು ನಾನು ತಡವಾಗಿ ಈ ಅರ್ಜಿ ಸಲ್ಲಿಸಿದ್ದೇನೆ ಎಂದರೆ ಸರಿ. ಈ ಅಪಘಾತವು ಹಾನಗಲ್ಲ ಟೌನ್ ನಲ್ಲೇ ಆಗಿರುತ್ತದೆ ಎಂದರೆ ಸರಿ. ಆ ದಿನ ಲಾರಿ ಹಿಂದಿನಿಂದ ಬಂದು ನನಗೆ ಡಿಕ್ಕಿ ಪಡಿಸಿರುತ್ತದೆ. ಈ ಅಪಘಾತವು ನನ್ನ ತಪ್ಪಿನಿಂದಲೇ ಆಗಿದೆ ಎಂದರೆ ಸರಿಯಲ್ಲ. ನಾನು ನನ್ನ ಬೈಕನ್ನು ತಕ್ಷಣ ಬಲಭಾಗಕ್ಕೆ ತೆಗೆದುಕೊಂಡ ಕಾರಣ ಈ ಅಪಘಾತ ನನ್ನ ತಪ್ಪಿನಿಂದಲೇ ಆಗಿದೆ ಎಂದರೆ ಸರಿಯಲ್ಲ. ನನ್ನ ಮಗಳ ಅಪಘಾತಕ್ಕೆ ಸಂಬಂಧಪಟ್ಟಂತೆ ತಡವಾಗಿ ದೂರನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಅಪಘಾತವಾದ ನಂತರ ನನ್ನ ಮಗಳನ್ನು ಎಸ್ ಡಿ ಎಂ ಆಸ್ಪತ್ರೆಗೆ ಕರೆದುಕೊಂಡು ಹೋದೆನು. ದಿನಾಂಕ 28.01.2023 ರಂದು ನನ್ನ ಮಗಳನ್ನು ಎಸ್ ಡಿ ಎಂ ಆಸ್ಪತ್ರೆಗೆ ದಾಖಲು ಮಾಡಿದೆ ಎಂದರೆ ಸರಿ. ಸಾಕ್ಷಿಯು ಕಿಮ್ಸ ಆಸ್ಪತ್ರೆಯಲ್ಲಿ ಚಿಕಿತ್ಸೆ ಹಿಡಿಯದೇ ಇದ್ದ ಕಾರಣ ಎಸ್ ಡಿ ಎಂ ಗೆ ಹೋದೆ ಎಂದು ಸ್ವತಃ ನುಡಿಯುತ್ತಾರೆ. ನನ್ನ ಮಗಳು ಎಸ್ ಡಿ ಎಂ ಆಸ್ಪತ್ರೆಯಲ್ಲಿ 4 ತಿಂಗಳು ಒಳರೋಗಿಯಾಗಿದ್ದಳು. ನನ್ನ ಮಗಳು ಸಂಪೂರ್ಣವಾಗಿ ಗುಣಮುಖಳಾದ ನಂತರ ಆಸ್ಪತ್ರೆಯಿಂದ ಡಿಸ್ಚಾರ್ಜ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಈ ಬಗ್ಗೆ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮಗಳಿಗೆ ಯಾವುದೇ ಅಂಗನ್ಯೂನ್ಯತೆ ಆಗಿಲ್ಲ ಎಂದರೆ ಸರಿಯಲ್ಲ.

(2 ನೇ ಎದುರುದಾರರ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು ನೀಡಲಾಗಿದೆ)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ನ. ಸ. ಓ. ಹೇ. ಕೆ ಸರಿ ಇದೆ

ಎಂದು ಒಪ್ಪಿರುತ್ತಾರೆ.

Sd/-

ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು

ಸಾಕ್ಷಿದಾರರ ಸಹಿ ಹಾನಗಲ್